ಆಗುವಂಥಾದ್ದಕ್ಕೆ ತೊಂದರೆಯಾಗುವಂಥ ಪರಿಸ್ಥಿತಿ ನಿರ್ಮಾಣ ಆಗಿಲ್ಲ. ನಾನು ಆ ಆಸ್ಪತ್ರೆಗೆ ಜಿಲ್ಲಾ ಉಸ್ತುವಾರಿ ಮಂತ್ರಿಯಾಗಿದ್ದಾಗ ಬಹಳಷ್ಟು ಸಾರಿ ಭೇಟಿ ಕೊಟ್ಟಿದ್ದೇನೆ. ಆ ಆಸ್ಪತ್ರೆ ಬಗ್ಗೆ ಸಾಕಷ್ಟು ಆಸೆ ವಹಿಸಿ ಕೆಲಸ ಮಾಡಿದ್ದೇನೆ. ಇನ್ನು ಅಲ್ಲಿ ಬಂದ್ ಆಗಿದ್ದ ಐ.ವಿ. ಫ್ಲೂಯಿದ್ ಪ್ಲಾರಂಭ ಮಾಡಿಸಿ, ಕೆಲಸ ಕೂಡ ಪ್ಲಾರಂಭವಾಗಿದೆ. ಎಂದು ತಮ್ಮ ಮೂಲಕ ಮಾನ್ಯ ಸದಸ್ಯರ ಗಮನಕ್ಕೆ ತರಲಿಕ್ಕೆ ಇಚ್ಛಿಸುತ್ತೇನೆ.

ಔಷಧಿ ವಿತರಕರ ನೇಮಕ

115 - ಶ್ರೀ ಜಿ.ಪುಟ್ಟಸ್ವಾಮಿ ಗೌಡ (ಹೊಳಿನರಸೀಪುರ): ಮಾನ್ಯ ಆರೋಗ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭಾರತೀಯ ವೈದ್ಯಪದ್ಧತಿ ಮತ್ತು ಹೋಮಿಯೋಪತಿ ಇಲಾಖೆಯಲ್ಲಿರುವ ಆಯುರ್ವೇದ, ಯುನಾನಿ ಹಾಗೂ ಹೋಮಿಯೋಪತಿ ಔಷಧಿ ವಿತರಕರ ಹುದ್ದೆಗಳೆಷ್ಟು?

ಆ) ಅವುಗಳ ಪೈಕಿ ಒಟ್ಟು ಎಷ್ಟು ಹುದ್ದೆಗಳು ಖಾಲಿ ಇವೆ?

ಇ) ಆಯುರ್ವೇದ ಔಷಧಿ ವಿತರಕರ ತರಬೇತಿ ಕೋರ್ಸಿನ ಅವಧಿಯನ್ನು ಎರಡು ವರ್ಷಕ್ಕೆ ಹೆಚ್ಚಿಸಲು ಸರ್ಕಾರ ನಿರ್ಧರಿಸಿದೆಯೆ?

ಈ) ಹಾಗಿದ್ದಲ್ಲಿ ಆ ಕೋರ್ಸಿನ ಅವಧಿಯನ್ನು ಎರಡು ವರ್ಷಕ್ಕೆ ಹೆಚ್ಚಿಸಿದ ನಂತರ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕ್ರಮ ಕೈಗೊಳ್ಳಲಾಗುತ್ತದೆಯೇ?

ಶ್ರೀ ಬಿ.ಎಸ್. ಪಾಟೀಲ್ (ಸಾಸನೂರು) (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಭಾರತೀಯ ವೈದ್ಯಪದ್ಧತಿ ಮತ್ತು ಹೋಮಿಯೋಪತಿ ಇಲಾಖೆಯಲ್ಲಿ ಈ ಕೆಳಕಂಡಂತೆ ವೈದ್ಯಪದ್ಧತಿಗಳ ಔಷಧ ವಿತರಕರ ಹುದ್ದೆಗಳು ಮಂಜೂರಾಗಿರುತ್ತವೆ.

1.	ಆಯುರ್ವೇದ	-	205	ಹುದ್ದೆಗಳು
2.	ಯುನಾನಿ	-	48	ಹುದ್ದೆಗಳು
3.	ಹೋಮಿಯೋಪತಿ	-	10	ಹುದ್ದೆಗಳು

ಆ) ಅವುಗಳ ಪೈಕಿ ಈ ಕೆಳಕಂಡಂತೆ ವೈದ್ಯಪದ್ಧತಿಗಳ ಔಷಧಿ ವಿತರಕರ ಹುದ್ದೆಗಳು ಖಾಲಿ ಇರುತ್ತವೆ.

1.	ಆಯುರ್ವೇದ	-	105	ಹುದ್ದೆಗಳು
2.	ಯುನಾನಿ	-	16	ಹುದ್ದೆಗಳು
3.	ಹೋಮಿಯೋಪತಿ	-	8	ಹುದ್ದೆಗಳು

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.

ಶ್ರೀ ಜಿ. ಪುಟ್ಟಸ್ವಾಮಿಗೌಡ: ನಮ್ಮ ಕರ್ನಾಟಕ ರಾಜ್ಯದಲ್ಲಿ ಭಾರತೀಯ ವೈದ್ಯ ಪದ್ಧತಿಗೆ ಹೆಚ್ಚು ಒತ್ತುಕೊಡಬೇಕೆಂಬ ಸರ್ಕಾರದ ಒತ್ತಾಸೆಯ ಹಿನ್ನೆಲೆಯಲ್ಲಿ ಕೇಂದ್ರಸರ್ಕಾರದ ಯೋಜನಾ ಆಯೋಗವೂ ಕೂಡ ರಾಜ್ಯಸರ್ಕಾರಕ್ಕೆ ನಿರ್ದೇಶನ ಕೊಟ್ಟಿದ್ದರೂ ಕೂಡ ರಾಜ್ಯ ಸರ್ಕಾರದಲ್ಲಿ ಔಷಧಿ ವಿತರಕರ ಹುದ್ದೆಗಳು ಶೇಕಡ 30 ರಷ್ಟು ತುಂಬಲ್ಪಟ್ಟಿದ್ದು ಇನ್ನು 70 ಪರ್ಸೆಂಟ್ ಖಾಲಿ ಇಟ್ಟುಕೊಂಡಿರುವುದರಿಂದ ನಮ್ಮ ಭಾರತೀಯ ವೈದ್ಯ ಪದ್ಧತಿಗೆ ಹೆಚ್ಚಿನಮಹತ್ವ ಕೊಡಲು ಸಾಧ್ಯವೇ? ಇಷ್ಟೊಂದು ಬೃಹತ್ ಪ್ರಮಾಣದಲ್ಲಿ ಹುದ್ದೆಗಳು ಖಾಲಿ ಇರುವಾಗ ಇವುಗಳನ್ನು ತುಂಬಲು ರಾಜ್ಯ ಸರ್ಕಾರಕ್ಕೆ ಏನು ತೊಂದರೆ ಇದೆ? ಆದರೆ ಹಣಕಾಸಿನ ಕೊರತೆ ಏನಾದರೂ ಇದೆಯೇ?

ಹಾಗೇನಾದರೂ ತೊಂದರೆ ಇದ್ದರೆ, ಈ ಉದ್ದೇಶವನ್ನು ಕೈ ಬಿಡುವ ಉದ್ದೇಶ ಸರ್ಕಾರಕ್ಕೆ ಇದೆಯೇ ಎಂಬುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಪಾಟೀಲ್ ಸಾಸನೂರು: ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿ ಅಷ್ಟೊಂದು ಹುದ್ದೆಗಳನ್ನು ನಾವು ಖಾಲಿ ಇಟ್ಟಿಲ್ಲ. ಈಗಾಗಲೇ ಯುನಾನಿ ಫಾರ್ಮಾಸಿಸ್ಟ್ ಹುದ್ದೆಗಳು 16 ಖಾಲಿ ಇದ್ದು ಅವುಗಳ ಪೈಕಿ 11 ಹುದ್ದೆಗಳನ್ನು ನಾವು ಭರ್ತಿ ಮಾಡಿದ್ದೇವೆ. ಆಯುರ್ವೇದದಲ್ಲಿ 106 ಹುದ್ದೆಗಳ ಪೈಕಿ 22 ಹುದ್ದೆಗಳನ್ನು ಇನ್ನು 15 ದಿವಸ ಅಥವಾ ಒಂದು ತಿಂಗಳಲ್ಲಿ ಭರ್ತಿ ಮಾಡುವ ವಿಚಾರ ಸರ್ಕಾರದಲ್ಲಿದೆ. ಇನ್ನುಳಿದ ಹುದ್ದೆಗಳನ್ನು ಹಂತ ಹಂತವಾಗಿ ತುಂಬುವ ಯೋಜನೆಯನ್ನು ಸರ್ಕಾರ ಮಾಡುತ್ತದೆ.

ಶ್ರೀ ಜಿ. ಪುಟ್ಟಸ್ವಾಮಿ ಗೌಡ: ಹುದ್ದೆಗಳನ್ನು ಖಾಲಿ ಇಟ್ಟಿಲ್ಲವೆಂದು ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ, ಅವರು ಕೊಟ್ಟಿರತಕ್ಕ ಅಂಕಿಅಂಶಗಳನ್ನೇ ತೆಗೆದುಕೊಂಡು ಹೇಳುವುದಾದರೆ 205 ಹುದ್ದೆಗಳ ಪೈಕಿ 105 ಹುದ್ದೆಗಳನ್ನು ಭರ್ತಿ ಮಾಡಿದ್ದಾರೆ. ಅಂದಮೇಲೆ ಇನ್ನೂ 100 ಹುದ್ದೆಗಳು ಖಾಲಿ ಇರೆ. ಯುನಾನಿ 48 ರಲ್ಲಿ ಇನ್ನೂ 16 ಹುದ್ದೆಗಳು ಖಾಲಿ ಇವೆ ಹೋಮಿಯೋಪತಿ 10 ಹುದ್ದೆಗಳ ಪೈಕ 8 ಹುದ್ದೆಗಳು ಖಾಲಿ ಇವೆ. ಆದರೆ ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ. ಮಾನ್ಯ ಸದಸ್ಯರು ಹೇಳಿದಷ್ಟು ಹುದ್ದೆಗಳು ಖಾಲಿ ಇಲ್ಲವೆಂದು. ಆದ್ದರಿಂದ ಇದರ ಬಗ್ಗೆ ಅವರು ಸ್ಪಷ್ಟೀಕರಣ ನೀಡಬೇಕು.

ಶ್ರೀ ಬಿ.ಎಸ್. ಪಾಟೀಲ್ ಸಾಸನೂರು: ಆಯುರ್ವೇದ ಮತ್ತು ಯುನಾನಿಗೆ ಸಂಬಂಧಪಟ್ಟಂತೆ ನಾನು ಹೇಳುತ್ತಿದ್ದೇನೆ. ಹೋಮಿಯೋಪತಿಯಲ್ಲಿ 10 ಹುದ್ದೆಗಳ ಪೈಕಿ 8 ಹುದ್ದೆಗಳನ್ನು ಇಷ್ಟರಲ್ಲೇ ತುಂಬತಕ್ಕ ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ನಮ್ಮ ಇಲಾಖೆಯಲ್ಲಿ ಕಳೆದ ನಾಲ್ಕಾರು ವರ್ಷಗಳಿಂದ ಯಾವುದೇ ಹುದ್ದೆಗಳನ್ನೂ ತುಂಬದೇ ಇರುವುದರಿಂದ ಇಷ್ಟೊಂದು ಹುದ್ದೆಗಳು ಖಾಲಿ ಇವೆ ಎಂಬುದನ್ನು ಹೇಳಬಯಸುತ್ತೇನೆ. ಪ್ರಶ್ನೆಯನ್ನು ಕೇಳಿರತಕ್ಕ ಮಾನ್ಯ ಸದಸ್ಯರು ಈ ಹಿಂದೆ ಇದೇ ಖಾತೆಯಲ್ಲಿ ಬಹಳಷ್ಟು ದಿವಸ ಕೆಲಸ ಮಾಡಿರುವುದರಿಂದ ಅವರಿಗೆ ಇದರ ಬಗ್ಗೆ ಹೆಚ್ಚಿನ ಅನುಭವ ಇದೆ. ನಾನು ವಿಶೇಷವಾಗಿ ಏನನ್ನೂ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಆದಷ್ಟು ಬೇಗ ವೈದ್ಯರ ಹುದ್ದೆ, ಫಾರ್ಮಾಸಿಸ್ಟ್ ಹುದ್ದೆ ಅಥವಾ ಇನ್ನಾವುದೇ ಖಾಲಿ ಇರತಕ್ಕ ಹುದ್ದೆಗಳನ್ನು ತುಂಬುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಬಯಸುತ್ತೇನೆ.

ಹಾಲು ಸಹಕಾರಿ ಸಂಘಗಳ ನೊಂದಣಿ

117 - ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು): ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುಳಬಾಗಿಲು ತಾಲ್ಲೂಕು ಶಾಸಕರಿಂದ ಹಾಲು ಉತ್ಪಾದಕರ ಸಂಘಗಳ ನೊಂದಾವಣೆ ಮಾಡಬೇಕೆಂದು 1990 ಜನವರಿಯಿಂದ ಸಂಬಂಧಪಟ್ಟ ಜಿಲ್ಲಾ ಹಾಲು ಉತ್ಪಾದಕರ ಒಕ್ಕೂಟಕ್ಕೆ ಬರೆದ ಪ್ರಕಾರ ಒಟ್ಟು ಗ್ರಾಮಗಳ ಸಂಖ್ಯೆ ಎಷ್ಟು ಮತ್ತು ಅವುಗಳ ಹೆಸರುಗಳೇನು

ಆ) ಅವುಗಳಲ್ಲಿ ಇದುವರೆವಿಗೂ ನೊಂದಾವಣೆ ಮಾಡಿದ ಹಾಲು ಉತ್ಪಾದಕರ ಸಂಘಗಳೆಷ್ಟು?

ಇ) ಮಿಕ್ಕ ಗ್ರಾಮಗಳಲ್ಲಿ ನೊಂದಾವಣೆ ಮಾಡದಿರಲು ಕಾರಣಗಳೇನು?

ಈ) ಸಂಬಂಧಪಟ್ಟ ಅಧಿಕಾರಿಗಳು ಸರಿಯಾದ ಕಾರಣ ಕೊಡದೆ ವರ್ಷಾನುಗಟ್ಟಲೆ ತಡೆಹಿಡಿಯಲು ಕಾರಣಗಳೇನು?